**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ.,**

**ಹಿರೇಕೆರೂರು.**

**ಸಿ.ಸಿ ನಂಬರ್ಃ 202/2021**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,

ರಟ್ಟೀಹಳ್ಳಿ ಪೊಲೀಸ್ ಠಾಣಾ ಪೋಲೀಸರು.

**ವಿರುದ್ಧ**

ಆರೋಪಿತರುಃ 1. ರಿಯಾಜ್ ತಂದೆ ಮರ್ಧಾನಸಾಬ ಹುಬ್ಬಳ್ಳಿ.

2. ಅಲ್ಲಾಭಕ್ಷ ತಂದೆ ಮರ್ಧಾನಸಾಬ ಹುಬ್ಬಳ್ಳಿ

3. ರಫಿಕ್ ತಂದೆ ಮರ್ಧಾನಸಾಬ ಹುಬ್ಬಳ್ಳಿ

4. ಮರ್ಧಾನಸಾಬ ತಂದೆ ಮೌಲಾಸಾಬ ಹುಬ್ಬಳ್ಳಿ (ಮೃತ)

5. ಬೀಬಿಜಾನ್ ಕೋಂ ಮರ್ಧಾನಸಾಬ ಹುಬ್ಬಳ್ಳಿ (ಮೃತ)

**ದೋಷಾರೋಪಣೆ**

ನಾನು ಶ್ರೀಮತಿ. ಸವಿತಾ ನಿಂಗಪ್ಪ ಮುಕ್ಕಲ್ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಹಿರೇಕೆರೂರು, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

1. ದಿನಾಂಕಃ 04-10-2019 ರಂದು ಮುಂಜಾನೆ 11-00 ಗಂಟೆ ಸುಮಾರಿಗೆ ರಟ್ಟೀಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ, ಮೇದೂರ ಗ್ರಾಮದಲ್ಲಿ ಪಿರ್ಯಾದಿಯ ಗಂಡ ಚಾಸಾ-4 ನೇದ್ದವರು ಕಾಮೇಶ್ವರ ಬೀದಿಯಲ್ಲಿರುವ ಹಿಟ್ಟಿನ ಗಿರಣಿಯಲ್ಲಿ ಕೆಲಸ ಮಾಡುವಾಗ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದು, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

2. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಪಿರ್ಯಾದಿಯ ಗಂಡ ಚಾಸಾ-4 ನೇದ್ದವರು ಕಾಮೇಶ್ವರ ಬೀದಿಯಲ್ಲಿರುವ ಹಿಟ್ಟಿನ ಗಿರಣಿಯಲ್ಲಿ ಕೆಲಸ ಮಾಡುವಾಗ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರ

ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

3. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಪಿರ್ಯಾದಿಯ ಗಂಡ ಚಾಸಾ-4 ನೇದ್ದವರು ಕಾಮೇಶ್ವರ ಬೀದಿಯಲ್ಲಿರುವ ಹಿಟ್ಟಿನ ಗಿರಣಿಯಲ್ಲಿ ಕೆಲಸ ಮಾಡುವಾಗ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದು ತಂಟೆ ತೆಗೆದು ಆರೋಪಿ ನಂ.3 ರವ ಚಾಸಾ-4 ರವರ ಕೈಗಳನ್ನು ಹಿಡಿದುಕೊಂಡಿದ್ದು, ಆರೋಪಿ ನಂ.1 ಮತ್ತು 2 ನೇದ್ದವರು ಕೂಡಿಕೊಂಡು ತಮ್ಮ ಕೈಗಳಿಂದ ಮೈ-ಕೈಗೆ, ಮುಖಕ್ಕೆ ಹೊಡಿ ಬಡಿ ಮಾಡಿದ್ದು, ಆರೋಪಿ ನಂ.4 ಮತ್ತು 5 ರವರು ತಮ್ಮ ಕೈಗಳಿಂದ ಕಪಾಳಕ್ಕೆ ಹೊಡೆದು ಚಾಸಾ-4 ರವರಿಗೆ ಸಾದಾ ಸ್ವರೂಪದ ಗಾಯಗಳನ್ನು ಉಂಟುಮಾಡಿ ಮತ್ತು ಪಿರ್ಯಾದಿಯನ್ನು ಎಳೆದಾಡಿ ತಮ್ಮ ಕೈಗಳಿಂದ ಹೊಡಿ ಬಡಿ ಮಾಡಿ, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

4. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಯ ತಲೆಯ ಕೂದಲನ್ನು ಹಿಡಿದು ಎಳೆದಾಡಿ, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 149 ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

5. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಯ ಮೈ ಮೇಲಿನ ಬಟ್ಟೆ ಜಗ್ಗಾಡಿ ಸಾರ್ವಜನಿಕವಾಗಿ ಅವಳನ್ನು ಅವಮಾನ ಮಾಡಿ, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ ಕಲಂ 149 ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

6. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಯ ಗಂಡ ಅಫ್ಜಾದ ಈತನಿಗೆ ಮಿಂಡ್ರಿ ಮಗನ, ಸೂಳೆ ಮಗನ ಎಂದು ಅವಾಚ್ಯವಾಗಿ ಬೈದು, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149

ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

7. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಯ ಗಂಡನಿಗೆ ಗಿರಣಿಯಲ್ಲಿ ಹಿಸ್ಸೆ ಕೊಡದಿದ್ದಲ್ಲಿ ನಿನ್ನ ಪ್ರಾಣ ತಗಿಯುತ್ತೇವೆ ಎಂದು ಜೀವ ಬೆದರಿಕೆ ಹಾಕಿ, ಆರೋಪಿ ನಂ.1 ರಿಂದ 5 ರವರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ಅರ್ಥವಾಯಿತೇ ?

ಆರೋಪಿತರ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿತ ಉತ್ತರಃ

(ಆರೋಪಿತನಿಗೆ ದಿನಾಂಕ 31-10-2023 ರಂದು ಆಪಾದನೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ.,
ಹಿರೇಕೆರೂರು

ದಿನಾಂಕಃ 31-10.2023
ನ್ಯಾಯಾಲಯ, ಹಿರೇಕೆರೂರು.

ಆರೋಪಿ ನಂ.1 ಸಹಿಃ                    ಆರೋಪಿ ನಂ.2 ಸಹಿಃ

ಆರೋಪಿ ನಂ.3 ಸಹಿಃ

///Accused are present. Advocate for accused present.

Hence, Charges for the offences punishable U/sections 279, 337, 338, 304(A), of IPC., and 128(1) R/w 194 (C), 129 R/w 194D of MV Act., of same are read over and explained to the accused in the Kannada language. The accused denied the same and claimed to be tried. Hence, issue witness summons to Cw-1 and CW2. by:

Addl. CJ & JMFC.,HKR